ಶ್ರೀ ಎಂ ಎಚ್. ಜಯಪ್ರಕಾಶ ನಾರಾಯಣ್ : ಈ ಕೊಳಚೆ ಪ್ರದೇಶಗಳನ್ನು ಉತ್ತಮಪಡಿಸುವ ಸಲುವಾಗಿ ಮೊದಲ ವರ್ಷ ೭೫ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಎರಡನೇ ವರ್ಷ ಕೇವಲ ೫೦ ಲಕ್ಷ ರೂಪಾಯಿಗಳನ್ನು ಒದಗಿಸಲು ಕಾರಣವೇನು ? ಮೊದಲು ಒದಗಿಸಿದ ಹಣ ಖರ್ಚಾಗಲಿಲ್ಲವೆಂದು ಹಣ ಕಡಿಮೆ ಮಾಡಲಾಯಿತೋ ಅಥವಾ ಆ ಒಂದು ಕೆಲಸದ ಪ್ರಗತಿ ಆಗಲಿಲ್ಲವೆಂಬ ಕಾರಣದಿಂದ ಹಣ ಕಡಿಮೆ ಒದಗಿಸಲಾಯಿತೋ ?

ಶ್ರೀ ಡಿ. ಕೆ. ನಾಯಕರ್: ಕೆಲವು ಸಲ ಹಣವಿದ್ದಿರೂ ಸಹ ಕಾನೂನಿನ ಅಡ್ಡಿಯಿಂದಾಗಿ ಅದನ್ನು ಖರ್ಚು ಮಾಡಲು ಸಾಧ್ಯವಾಗುವುದಿಲ್ಲ ; ಜೊತೆಗೆ ನಾವು ನಮ್ಮ ಹಣದ ಅನುಕೂಲತೆಯನ್ನು ನೋಡಿಕೊಂಡು ಈ ವಿಚಾರದಲ್ಲಿ ಖರ್ಚು ಮಾಡುತ್ತಿದ್ದೇವೆ.

ಶ್ರೀ ಟಿ ಆರ್. ಶಾಮಣ್ಣ : ಈ ಕೊಳಚೆ ನಿರ್ಮೂಲನಾ ಮಂಡಲಿ ಅಸ್ತಿತ್ವದಲ್ಲಿ ಬಂದಮೇಲೂ ಸಹ ಕೆಲವು ಕೊಳಚೆ ಪ್ರದೇಶಗಳು ಹೊಸದಾಗಿ ನಿರ್ಮಾಣವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದನ್ನು ತಡೆಗಟ್ಟುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ? ಮಾನ್ಯ ಮಂತ್ರಿಮಂತ್ರಿಗಳು ಬಿ ಡಿ. ಎ. ಅನ್ನು ಇನಾಗ್ಯುರೇಟ್ ಮಾಡುವ ಸಂದರ್ಭದಲ್ಲಿ ಈ ಕೊಳಚೆ ನಿರ್ಮೂಲನಾ ಮಂಡಲಿಯನ್ನು ಸಹ ಅದಕ್ಕೆ ಸೇರಿಸುವ ಬಗ್ಗೆ ಯೋಚನೆ ಮಾಡಬಹುದೆಂದು ಹೇಳಿದರು ; ಆ ಬಗ್ಗೆ ಸರ್ಕಾರದ ಹತ್ತಿರ ಏನಾದರು ಪ್ರಪೋಸಲ್ ಇದೆಯೇ ಅಥವಾ ಈಗಿನ ರೂಪದಲ್ಲಿಯೇ ಮುಂದುವರಿಸಲಾಗುತ್ತದೆಯೇ ?

ಶ್ರೀ ಡಿ. ಕೆ. ನಾಯಕರ್: ನಾನು ಮೊದಲೇ ಹೇಳಿದಂತೆ ಈ ಬಗ್ಗೆ ಪ್ರತ್ಯೇಕವಾಗಿ ನಿರ್ಣಯ ತೆಗೆದುಕೊಳ್ಳುವುದಿದೆ ; ಅದು ಸರ್ಕಾರದಗಮನದಲ್ಲಿದೆ ; ಆದರೆ ಹೊಸದಾಗಿ ಕೊಳಚೆ ಪ್ರದೇಶಗಳು ಉದ್ಭವವಾಗದಂತೆ ನೋಡಿಕೊಳ್ಳಲಾಗುತ್ತಿದೆ ; ಆದರೂ ಸಹ ಮಾನ್ಯ ಶಾಮಣ್ಣನವರಿಗೆ ತಿಳಿದಂತೆ ಎಲ್ಲಿಯಾದರೂ ಸಣ್ಣ ಸಣ್ಣ ಕೈಗಾರಿಕೆಗಳು ಪ್ರಾರಂಭವಾದರೆ ಅದರ ಸಮೀಪದಲ್ಲಿಯೇ ಕೊಳಚೆ ಪ್ರದೇಶಗಳು ನಿರ್ಮಾಣವಾಗುತ್ತವೆ ; ಆ ರೀತಿ ಗುಡಿಸಲುಗಳನ್ನು ಅವರು ಹಾಕಿಕೊಂಡಾಗ ಅವರನ್ನು ಅಲ್ಲಿಂದ ಕೋರ ಮಂಗಲಕ್ಕೆ ಕಳುಹಿಸಲು ಪ್ರಯತ್ನ ಮಾಡುತ್ತೇವೆ. ಈಗ ಸಧ್ಯಕ್ಕೆ ನಗರ ಮಧ್ಯದಲ್ಲಿ ಕೊಳಚೆ ಪ್ರದೇಶಗಳು ನಿರ್ಮಾಣವಾಗುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ ;

Nursery Schools in Dharwar District

123. SRI B. G. BANAKAR (Hirekerur)—Will the Minister for Education be pleased to state.—

(*a*) the total number of Nursery Schools in Dharwar District as on 31st March 1975;

(*b*) the total number of teachers and other staff working in all these Nursery School as on 31st March 1975;

(*c*) the total amount of salary, allowances and other emoluments paid to these teachers and other staff for the year 1974-75 *ie.*, from 1st April 1974 to 31st March 1975 ?

SRI M. MALLIKARJUNASWAMY (Minister for Education)

(*a*) 40

(*b*) 51

(*c*) Rs. 42,430 paid by Government as grants to the Managements. The grant is expected to cover 25 per cent of admissible expenditure and 50 per cent D.A. grants.

ಶ್ರೀ ಬಿ. ಜಿ. ಬಣಕಾರ್—ಶಿಶುವಿಹಾರದ ಮೂಲಕ ಮಕ್ಕಳಿಗೆ ಶಿಕ್ಷಣ ಕೊಡುವ ಪದ್ಧತಿ ಬಹಳ ಆತ್ಯಾವಶ್ಯಕವಾಗಿರುವುದರಿಂದ ಇಂತಹ ಶಾಲೆಗಳನ್ನು ಪ್ರತಿ ಜಿಲ್ಲೆಗಳಲ್ಲಿ ಅಂದರೆ ಪ್ರತಿ ಗ್ರಾಮಗಳಲ್ಲಿಯೂ ತೆರೆಯಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ—ಮಾನ್ಯ ಸದಸ್ಯರು ಇಲ್ಲಿ ಕೇಳಿರುವ ಪ್ರಶ್ನೆಯೇ ಬೇರೆಯಾಗಿದೆ ಮತ್ತು ಈಗ ಹಾಕುತ್ತಿರುವ ಪ್ರಶ್ನೆಯೇ ಬೇರೆಯಾಗಿದೆ:

ಶ್ರೀ ಬಿ. ಜಿ ಬಣಕಾರ್—ಧಾರವಾಡ ಜಿಲ್ಲೆಯಲ್ಲಿ ಈ ಶಾಲೆಗಳನ್ನು ನಡೆಸುವವರಿಗೆ ಶೇಕಡಾ ೨೫ ರಷ್ಟು ಗ್ರಾಂಟ್ ಕೊಡಲಾಗಿದೆ; ಆದರೆ ಬಂಗಳೂರಿನಲ್ಲಿ ಇದೇ ಶಾಲೆಗಳನ್ನು ನಡೆಸುವವರಿಗೆ ಶೇಕಡಾ ನೂರಷ್ಟು ಗ್ರಾಂಟ್ ಕೊಡಲಾಗುತ್ತಿದೆ, ಈ ರೀತಿ ಏರುಪೇರು ಇರಲು ಕಾರಣವೇನು ? ಇಡೀ ರಾಜ್ಯಕ್ಕೆಲ್ಲಾ ಅನ್ವಯವಾಗುವಂತೆ ಒಂದೇ ತರಹ ಗ್ರಾಂಟ್ ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ—ಯೂನಿಫಾರವ್ಸ್ ಗ್ರಾಂಟ್-ಇನ್-ಯೆಡ್ ಕೋಡನ್ನು ಮಾಡಬೇಕೆಂದು ಸರ್ಕಾರ ಯೋಜನೆ ಮಾಡಿದೆ. ಆ ಸಂದರ್ಭದಲ್ಲಿ ಇದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಬಿ ಜಿ. ಬಣಕಾರ್—ಈಗ ಪ್ರಾಥಮಿಕ ಶಾಲೆಗಳಿಗೆ ೫ನೇ ವರ್ಷದಿಂದ ಮಕ್ಕಳು ಹೋಗುತ್ತಾರೆ. ಆದರೆ ಶಿಶುವಿಹಾರಗಳಿಗೆ ೩ ರಿಂದ ೫ನೇ ವರ್ಷದವರೆಗಿನ ಮಕ್ಕಳು ಹೋಗುತ್ತಾರೆ ಈ ಕಾರಣದಿಂದ ಪ್ರಾಥಮಿಕ ಶಾಲೆಗಳಿಗೇ ಈ ಶಿಶುವಿಹಾರಗಳನ್ನು ಏತಕ್ಕೆ ಜೋಡಿಸಬಾರದು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ – ಪ್ರಾಥಮಿಕ ಶಾಲೆಗಳೇ ಬೇರೆ. ಪೂರ್ವ-ಪ್ರಾಥಮಿಕ ಶಾಲೆಗಳೇ ಬೇರೆ; ಮಾನ್ಯ ಸದಸ್ಯರು ಹೇಳುವಂತಹ ಪದ್ಧತಿಯನ್ನು ಜಾರಿಗೆ ತರುವುದು ಅಷ್ಟು ಸರಿಹೋಗಲಾರದು:

ಶ್ರೀ ಬಿ. ಪುಟ್ಟಸ್ವಾಮಯ್ಯ– ಈಗ ಮಕ್ಕಳ ಮತ್ತು ತಾಯಂದಿರ ಯೋಗಕ್ಷೇಮ ನೋಡಿಕೊಳ್ಳಲು ಅಲಾಯಿದ ಇಲಾಖೆಯಿರುವುದರಿಂದ, ಈ ಶಿಶುವಿಹಾರಗಳನ್ನು ನೋಡಿಕೊಳ್ಳಲು ಆ ಇಲಾಖೆಗೇ ವಹಿಸುವುದು ಸೂಕ್ತವಲ್ಲವೇ ?

ಅಧ್ಯಕ್ಷರು—ಅದು ಊಹಾಪೋಹದ ಪ್ರಶ್ನೆ

ಶ್ರೀ ಕೋಣಂದೂರು ಲಿಂಗಪ್ಪ—ಮಾನ್ಯ ಪುಟ್ಟಸ್ವಾಮಯ್ಯನವರು ಕೇಳಿದ ಪ್ರಶ್ನೆ ಅರ್ಥಪೂರ್ಣವಾಗಿದೆ. ನರ್ಸರಿ ಶಾಲೆಗಳಿಂದ ಹಿಡಿದು ಮಾಧ್ಯಮಿಕ ಶಾಲೆಗಳವರೆಗೆ ಹೋಗುವವರನ್ನೆಲ್ಲಾ ಮಕ್ಕಳೆಂದೇ ಕರೆಯಬೇಕಾಗುತ್ತೆವೆ ಆದಕಾರಣ ಮಾನ್ಯ ಮಂತ್ರಿಗಳು ಈ ಶಾಲೆಗಳ ಆಡಳಿತವನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳದೆ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗೆ ವಹಿಸಿಕೊಡುವುದು ಯೋಗ್ಯವಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ—ನೀವು ಹೇಳುತ್ತಿರುವ ಒಂದು ವಿಶೇಷವಾದಂಥ ವ್ಯಾಪ್ತಿಯೊಳಗೆ ಪ್ರೌಢಶಾಲೆಗಳೂ ಸಹ ಬರುತ್ತವೆ. ಏಕೆಂದರೆ ೧೬ ವರ್ಷದ ವಯಸ್ಸಿನವರೆಗಿನ ಮಕ್ಕಳು ಆ ಶಾಲೆಗಳಲ್ಲಿ ಕಲಿಯುತ್ತಿರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ— ಅಲ್ಲಿಯವರೆಗಿನ ಶಾಲೆಗಳನ್ನು ಅವರಿಗೆ ಬಿಟ್ಟುಕೊಟ್ಟು ತಾವು ಯೂನಿವರ್ಸಿಟಿಗಳಿಗೆ ಮಂತ್ರಿಗಳಾಗಿರಬಹುದು;

Handloom Centre at Bidar

395. SRI MANIK RAO PHULEKAR (Bidar)—Will the Minister of State for Small Scale Industries be pleased to state—

whether there is any proposal to start a Handloom Centre at Bidar; if so, when this work will be taken up ?

SRI M VEERAPPA MOILY—(Minister of State for Small Scale Industries)

There is no such proposal.